## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ನೇತಾಡೋ ತಿಳಿಹಸಿರು ಸೋಗೆಗರಿಗಳು, ಸುಳಿಗಳು, ಹೆಡೆಮಟ್ಟೆಗಳು, ಸೋಗೆ ಗರಿಗಳ್ ಮಧ್ಯೆ ದುಂಡುಕ್ಕೆ ಬೇರ್ಬೇರೆ ಸೈಜಲ್ಲಿ ಒಂದಕ್ಕೊಂದು ಅಂಟ್ಕೊಂಡು ಇಕ್ಕಾಟ್ವಾದ್ರೂ ಪರ್ವಾಗಿಲ್ಲ ಪರಸ್ಪರ ತಬ್ಕೊಂಡು ಹೊಂದಾಣ್ಕೆ ಮಾಡ್ಕೊಂಡು, ಹಂಗೇ ಇಕ್ಕಿರಿದ ತೊನೆಗಾಯ್ಗಳು ತೊನೆಯುತ್ತಿದ್ರೆ... ಆ ಅಂದಕ್ಕೆ ಮನಸೋಲೋಕಾದ್ರೂ ಈ ಕಡೆ ಪ್ರವಾಸ ಮಾಡ್ಬೇಕಣೇಳಿ.

ಮಳೆ ಹೊಡಿತಿರ್ಬೇಕು, ಬೆಳಗಿನ ಜಾವ ಹೊಳಪಿನ ಸೂರ್ಯ, ಆ ತೆಂಗೆಲೆಗಳು ಪರಸ್ಪರ ತಾಗಿ ಸುಯ್ ಅಂತ ಚಪ್ಪಾಳೆ ಹೊಡೆಯೋ ಹಂಗೆ ಶಬ್ದ, ಗರಿಗಳ ತುದಿಯಲಿ ಒರತೆ ಹನಿಗಳು, ಅಲ್ಲೆಲ್ಲೋ ಕೋಗಿಲೆ ಹಾಂಗೆ ಓಂದ್ ಎರ್ಡ್ಸಲ ಕೂಗ್ಬೇಕು.. ಇವೆಲ್ಲ ಸೇರಿ ನಮ್ಮ ಹಳ್ಳಿ ಕಡೆ ತೆಂಗಿನ ವೈಭೋಗವೇ ವೈಭೋಗ.

ನಾನ್ ಚಿಕ್ಕವಳಿದ್ದಾಗ, ನಮ್ಮ ಅಜ್ಜ ಬದಿಗ್ ಕೂರಿಸ್ಕೊಂಡು ಕತೆ ಹೇಳ್ಬೇಕಾದ್ರೆ ಒಂದ್ಸಲ ತೆಂಗಿನ್ ಕತೆ ಹೇಳ್ತಾ ಇದ್ದ. 'ಈ ತೆಂಗಿನ ಮರ ಅಂತೋ ದೇವ್ರ ಕೊಡುಗೆ. ಇದ್ರ ಯಾವ್ ಭಾಗಾನೂ ವ್ಯರ್ಥ ಇಲ್ಲ. ನೀರು ಬೇಕಂದ್ರೆ ಕಾಯಿ ಕತ್ರುಸು, ಹಸಿವಂದ್ರೆ ಒಳಗಿನ್ ತಿರುಳ್ ತಿನ್ನು, ಒಣಗ್ಸಿ ಕೊಬ್ರಿ ಗಿಟುಕು ಮಾಡ್ಕೊ, ಕೊಬ್ರಿಯಿಂದ ಎಣ್ಣೆ ತೆಗ್ದು ಹಚ್ಕೋ, ಅದ್ರ ಎಲೆಲಿ ಆಟಕ್ಕೆ ಆಟಿಕೆ ಮಾಡ್ಬಹ್ದು, ತೊಗ್ಟೆ ಔಷ್ದ ಆಯ್ತುದೆ' ಅಂತ ಅಜ್ಜ ಹೇಳಿದ ಮಾತು ಇನ್ನೂ ನೆಪ್ಪಿದೆ.

'ಒಂದು ಕಾಲುಕ್ಕೆ ಅವ್ರಿವ್ರ ತೋಟ್ದಲ್ಲಿ ಕೆಲ್ಸ ಮಾಡಿ ದಿನುಕ್ಕೆ ಸಾವ್ರ ತೆಂಗಿನ್ ಕಾಯಿ ಸುಲ್ದು ಅವತ್ತವತ್ತಿನ ಕೂಲಿ ಇಸ್ಕೊಂಡು ಬತ್ತಿದ್ದೆ. ಅದು ಮನೆ ಭರ್ತಿ ಇದ್ದ ಮಕ್ಕಳಿಗೆ ಅವತ್ತಿನ ಹೊಟ್ಟೆಪಾಡು. ಎರ್ಡೂ ತೋಳು ನೋವ್ ಬರ್ತಿದ್ದಿದ್ದು ಅಷ್ಟಿಷ್ಟಲ್ಲ, ಮಕ್ಳನ್ನ ತೋಳ್ ಮೇಲೆ ಮಲ್ಗಿಸ್ಕಂಡ್ರೆ ನೋವ್ ಶಮ್ನ, ನಿಧಾನುಕ್ಕೆ ನಮ್ದೂ ಅಂತ ನೆಲ ದಕ್ಕಿದ್ಮೇಲೆ ಮೊದ್ಲು ತೆಂಗಿನ್ ಸಸಿ ನೆಟ್ಟೆ. ಆಮ್ಯಾಲಿಂದನೇ ಒಂದಷ್ಟು ಬಡ್ತನ ನೀಗ್ತು', ಅಂದವನ ಕಣ್ಣಲ್ಲಿ ಏನಿತ್ತು ಅಂತ ಆವತ್ತು ಗುರ್ತಿಸಕ್ಕಾಗಿರ್ಲಿಲ್ಲ.

ಅಜ್ಜನ ಚಿಕ್ ಹೊಲದ್ ಬದಿಲಿ ಹತ್ತಾರು ತೆಂಗಿನ ಮರಗಳಿದ್ವು. ಒಂದೊಂದು ಮರಕ್ಕೆ ಒಂದೊಂದ್ ಹೆಸರು ಇಟ್ಟಿದ್ದ, ಒಂದು ಗಟ್ಟಟ್ಟೆಯಾಗಿ ಕಾಯಿ ಕೊಡುವ ಮರಕ್ಕೆ 'ಘಟ್ವಾಣಿ ಮರ'. ಇನ್ನೊಂದು ಎಳೆಕಾಯ್ ಮರಕ್ಕೆ 'ಎಳ್ನನಿಂಬೆ' ತೊಗ್ಟೆ ಗಂಟು ಗಂಟಾಗಿರೊ ಮರಕ್ಕೆ'ಗಂಟುಮಲ್ಲ', ನೇರ ಉದ್ದಕ್ಕೆ ಬೆಳ್ದು ಕಾಯಿ ಬಿಡ್ದಿರೊ ಮರಕ್ಕೆ 'ನರಪೇತ್ಲ'... ಹಿಂಗೆ ಎಲ್ಲ ಮರ್ಗಳ್ನ ತಮ್ಮವ್ರಂತೆ ಕಂಡು ಮನುಷ್ರಿಗೆ ಅಡ್ಡ ಹೆಸರಿಟ್ಟಂತೆ ಕರಿತಿದ್ದ. ಮುಂದೆ ಅವ್ನ ಮಕ್ಳೂ ಅದುನ್ನೇ ರೂಡಿ ಮಾಡ್ಕೊಂಡಿದ್ವು.




ಇಲ್ಲಿ ಹಳ್ಳಿ ಕಡೆ ಮನ್ನನೆಗೂ ಹತ್ತನ್ನೆರಡು ಮರಗಳಾದ್ರು ಇರ್ತಿದ್ವು. ಮನೆ ಕಟ್ಬೋಕೆ ಮರಮುಟ್ಟು ಬೇಕಂದ್ರೆ ತೆಂಗಿನ್ ತೀರು ಉಪ್ಯೋಗುಕ್ ಬರಾದು. ಕಾಲ ಕಳ್ದಂಗೆ ಮನೆಲಿ ಪಾಲುಪಾರಿಕತ್ತಾದಂಗೆ ಮರ ಕಡ್ಯೋದು ಅಲ್ಲೆ ಮನೆ ಕಟ್ಕೊಂಡು ಇರೋದು ರೂಢಿಯಾಯ್ತು. ಮನೆ ಅಕ್ಕಕ್ಕಾಗೆ ತೆಂಗಿನ್ ಮರಗಳು ಕಡ್ಮೆಯಾಗಿ ಹೊಲ್ದಲ್ಲಷ್ಟೆ ಮರಗಳು ಉಳ್ಕಂಡ್ವು. ಆದ್ರೂ ಇಗ್ಲೂ ಮನೆ ಪಕ್ದಲ್ಲಿ ಅಲ್ಲಿಲ್ಲಿ ಒಂದೊ ಎರಡೊ ಕಾಣಿಸ್ಕೊಂಡ್ರೆ ಅದೇ ಪುಣ್ಯ. ತೆಂಗಿನ್ ಕಾಯ್ ಕೆಳಗ್ಬಿದ್ರೆ ಅಕ್ಕಕ್ಕದ್ ಮನೆಗ್ ಬೀಳ್ತದೆ, ಅಥ್ವಾ ಕಾಯ್ ಕೆಡವಿಸೋದ್ ಕಷ್ಟ ಅಂತ್ಲೂ ಸಮಸ್ಯೆ ಇರ್ತದೆ ಕಾಣ್ರಿ. ಈಗ ಕಾಯ್ ಕೆಡ್ವೋರು ಎಲ್ ಸಿಕ್ತಾರ್ ಹೇಳಿ. ಮಷೀನ್ ಇಟ್ಕೋಂಡು ಬೀಳಿಸ್ಬೇಕು ಇಲ್ವೇ ಗಟ್ಟಿಯಾಗಿದ್ರೆ ತಾವೇ ಮರ ಹತ್ತಿ ಕೀಳ್ಬೇಕು.

ತೆಂಗಿನ್ ಕಾಯಿ ಉಪ್ಯೋಗ ಯಾರಿಗ್ ಗುತ್ತಿಲ್ಲ ಹೇಳಿ. ಅಡ್ಗೆ ಮನ್ಲಿ ಎಲ್ಲಾ ಬಗೆ ತಿಂಡಿ ತೀರ್ಥ, ಸಾಂಬಾರು ಚಟ್ನಿ, ತಂಬುಳಿಗೆ, ಸಿಹಿಗೆ, ಕೋಸಂಬ್ರಿಗೆ, ಹಬ್ಬದ್ ಹೊತ್ಗೆ, ಕಾಯಿಂದು ಮೇಲೊದಿಕೆ ಒಡೆದು ಒಳಗಿನ ತುರಿ ಬಳಸಿ ಖಾದ್ಯ ಮಾಡಿದ್ರೆ ಆಹಾ! ಚಪ್ಪರಿಸ್ಕೊಂಡು ತಿನ್ನೋಕೆ ಎಷ್ಟ್ ಕೈಯಿದ್ರೂ ಸಾಲ್ದು. ಮದುವೆ, ಹಬ್ಬ, ತಿಥಿ ಎಲ್ಲದ್ರಲ್ಲೂ ತೆಂಗು ಮೊದಲು. ತೆಂಗಿಲ್ಲ ಅಂದ್ರೆ ಯಾವ್ ಕಾರ್ಯ ನಡ್ದೀತು?

ಮೊದಲ ಸರ್ತಿಗೆ ನಾನು ಕೆಲ್ಸ ಮಾಡ್ತಿದ್ದ ಹಳ್ಳಿಯ ದೇವರ ಜಾತ್ರೆಲಿ ಭಾಗ್ವಹಿಸಿದ್ದೆ. ಯಾರು ದೇವ್ರ ತೇರಿನ್ ಮುಂಭಾಗ ಮದ್ಲ ತೆಂಗು ಒಡಿತಾರೊ, ಅವರ ಮನೆಗೆ ಆ ವರ್ಷ ಸಮೃದ್ಧಿ ಅಂತ ನಂಬ್ಕೆಯಿತ್ತು ಅಲ್ಲಿ, ಹಂಗಾಗಿ ಪ್ರತೀ ವರ್ಷ ಒಂದೊಂದ್ ಕುಟುಂಬಕ್ಕೆ ಕಾಯಿ ಒಡ್ಯೋ ಕಾಯಕ ಸಿಗೋದು. ಅವ್ರು ಭಕ್ತಿಯಿಂದ ಊದ್ದಕ್ಕೆ ಕಾಯಿ ನಿವಾಳಿಸಿ ಒಡೆದ್ರೆ ಸುತ್ತುಕ್ 'ಪಟ್, ರಪ್' ಅಂತೆಲ್ಲ ಒರಟು ಶಬ್ದ ಬರ್ತಿತ್ತು. ತರ್ಗೋ ಸುತ್ತೂ ನಿಂತಿದ್ದ ಮಕ್ಳು, ಕೆಲವು ದೊಡ್ಡವ್ರೂ ಮುಗಿಬಿದ್ದು, ಎದ್ದೊ ಬಿದ್ದೋ ಅಂತ ಕಾಯಿ ತುಂಡು ತಿನ್ನೋದಕ್ಕೆ ಪೈಪೋಟಿ ಮಾಡ್ತಿದ್ರು. ಒಂದ್ವೇಳೆ ಕಾಯಿ ಒಂದೇ ಸಲಕ್ ಒಡೀಲಿಲ್ಲ ಅನ್ನಳಿ, ಓ ಏನತದೋ ಕಾದಿದೆ ಕಣ್ರಪ್ಪ ಅಂತ ಆಯಾ ಮನೆವ್ರಿಗೆ ಆತಂಕ ಆಗ್ಬುಡದು. ಅಂತದ್ದೇನೂ ಅವಘಡ ಆಗ್ತಿರ್ಲಿಲ್ಲ ಅಂದ್ರೂನು ತಳಮಳ ತಪ್ತಿರ್ಲಿಲ್ಲ.

ಹಳ್ಳಿ ಜೀವ್ನ ಅಂದ್ರೆ, ಹೊಲುದ್ ಕೆಲಸ, ಕೊಯ್ಲು, ಹಬ್ಬ, ತೋಟ, ತೆಂಗು ಅಡಕೆ ಎಲ್ಲೂ. ಕೆಲ್ವೊಮ್ಮೆ ನಮ್ಗೆ ಬೇಸ್ಗೆ ಹೊತ್ಗೆ ಸೆನ್ಸಸ್‌ಗೆ ಹಾಕೋರು. ಬಾಯಾರಿ ಯಾರ್ ಮನೆಗ್ ಹೋದ್ರೂ, ಎಳ್ನೀರ್ ಕುಡೀತೀರಾ ಅನ್ನೋರು. ಆ ತಣ್ಣನೆ ನೀರು ಬಾಯಲ್ಲಿ ಹಾಯಿಸಿದ್ರೆ, ಅಷ್ಟೊತ್ತೂ ನಡೆದು ಬಂದ ದಣಿವೇ ತೂರಿ ಹೋಗ್ತಿತ್ತು.

ಇದೇ ತೆಂಗು, ನಮ್ ಸೀಮೆ ಬಡ್ವನ್ನ ಕಟ್ಟಿದ್ದೂ ಉಂಟು, ಕುಸಿದು ಬೀಳ್ಸಿದ್ದೂ ಉಂಟು. ರೈತ ಕಷ್ಟಪಟ್ಟು ಬೀಜ ನೆಟ್ಟು ವರ್ಷಗಟ್ಲೆ ಆರೈಕೆ ಮಾಡಿ ಮರ ಬೆಳ್ಸಿ ಕಾಯ್ಬಿಳೋರಿಲ್ದೆ ಏನೇನೋ ತಾರಾತಿಗಡಿ ಮಾಡಿ ಯಾರ್ಯಾರನ್ನೋ ಬೇಡಿ ಮರ ಹತ್ಸಿ ಕಾಯ್ರಾಶಿ ಹಾಕ್ಸಿ ಕೂಲಿ ಕೊಟ್ಟು, ವೆಹಿಕಲ್ ಬಾಡ್ಗೆ ಕೊಟ್ಟು ನಮ್ಮೂರಿನ್ ಮಾರ್ಕೆಟ್ಟಿಗೆ ಹೊತ್ಗೊ ಬರೊ ಹೊತ್ಗೆ ಸಾಕಪ್ಪ ಸಾವಾಸ ಅನ್ನಿರತ್ತೆ. ಹಂಗೋ ಹಿಂಗೋ ತಂದ್ರೆ




ಅರಸೀಕೆರೆ ಚಂದ್ರಮೌಳೇಶ್ವರ ದೇವಸ್ಥಾನ